**CC 3212/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 3212/2023

**ಸಿ ಡಬ್ಲೂ** 12

**ಪಿ ಡಬ್ಲೂಃ** 9

**ಸಾಕ್ಷಿಯ ಹೆಸರು -** **ಆರ್ ಪದ್ಮಾವತಿ**
**ಗಂಡನ ಹೆಸರು -** **ಮಹಾಂತೇಶ್**
**ವಯಸ್ಸು -** 51 **ವರ್ಷಗಳು**
**ಉದ್ಯೋಗ -** **ಪಿ.ಎಸ್.ಐ ಸಂಚಾರಿ ಪೋಲಿಸರ್ ಠಾಣೆ**
**ವಾಸಸ್ಥಳ -** **ಬಳ್ಳಾರಿ**

**ಸಾಕ್ಷಿಯನ್ನು ದಿನಾಂಕಃ** 19-02-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ಫೆಬ್ರುವತಿ **2023** ರಿಂದ ಜೂನ್ **2023** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **29-05-2023** ರಂದು ಸಂಜೆ **5.00** ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ **-1** ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ಸಂಖ್ಯೆ **69/2023** ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸದ್ದು, ಅದನ್ನು ಈಗಾಗಲೇ ನಿಪಿಃ **1** ಎಂದು, ಸಾಕ್ಷಿ ಯ ಸಹಿಯನ್ನು ನಿಪಿಃ **1(**ಬಿ**)** ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **11** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **11(** ಎ**)** ಎಂದು ಗುರುತಿಸಲಾಯಿತು.

ದಿಃ **30-05-2023** ರಂದು ಪಿರ್ಯಾದುದಾರರಿಗೆ ಕಲಂ **91** ಸಿ.ಆರ್.ಪಿ.ಸಿ ಅಡಿಯಲ್ಲಿ ತನಿಖೆಗೆ ಹಾಜರಾಗಲು ನೋಟಿಸ್ ನೀಡಿದ್ದೆ. ಸದರಿಯವರು ಠಾಣೆಯಲ್ಲಿ ಹಾಜರಾಗಿ ಮರುಹೇಳಿಕೆ ನೀಡಿದ್ದರು. ಸದರಿ

ಮರುಹೇಳಿಕೆಯಲ್ಲಿ ಪಟ್ಟಣ ಠಾಣೆಯ ಗುನ್ನೆ ನಂಬರ್ **125/2022** ಕಲಂ **498**ಎ, **323, 504** ಮತ್ತು **506** ಐಪಿಸಿ ಪ್ರಕರಣ ದಾಖಲಾಗಿದ್ದು ಅದು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಇದೆ ಎಂದು ತಿಳಿಸಿದರು. ಸದರಿ ಪುರಕಣವನ್ನು ವಾಪಸ್ ಪಡೆಯಲು ಮತ್ತು ಆ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನೀಡಿ ಅಂತ್ಯಗೊಳಿಸಲು ಆರೋಪಿ ವತ್ತಡ ಹೇರಿ, ಅವಾಚ್ಯ ಶಬ್ದಗಳಿಂದ ಬೈದು ಕೇಸ್ ಹಿಂಪಡೆಯಿದಿದ್ದರೆ ಕುತ್ತಿಗೆ ಹಿಸುಕಿ ಕೊಂದು ಹಾಕುವುದಾಗಿ ಪ್ರಾಣಬೆದರಿಕೆ ಹಾಕಿರುತ್ತಾನೆ ಎಂದು ಮತ್ತು ಚಾಸಾ **-4** ರವರು ಜಗಳ ಬಿಡಿಸಿರುವುದಾಗಿ ಹೇಳಿಕೆ ನೀಡಿರುತ್ತಾರೆ.

ಚಾಸಾ **-2** ಮತ್ತು **3** ರವರನ್ನು ಚಾಸಾ **-10** ರವರ ಮೂಲಕ ಕೃತ್ಯ ಸ್ಥಳಕ್ಕೆ ಬರಮಾಡಿಕೊಂಡು ಚಾಸಾ **-1** ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ **10** ರಿಂದ **11** ಗಂಟೆಯ ವರೆಗೆ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸದರಿ ಪಂಚನಾವೆಯನ್ನು ಲ್ಯಾಪ್ ಟಾಪ್‌ನಲ್ಲಿ ಮಾಡಿಸಿರುತ್ತೇನೆ. ಸ್ಥಳದಲ್ಲಿ ಭಾವಚಿತ್ರ ಮತ್ತು ನಕಾಶೆ ತೆಗೆಯಲಾಗಿತ್ತು. ಸಾಕ್ಷಿ ನಿಪಿಃ **2** ರ ಪಂಚನಾಮೆ ನೋಡಿ ಗುರುಸಿರುತ್ತಾರೆ. ಸಾಕ್ಷಿಯ ಸಹಿಯನ್ನು **2(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿ ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾಗಿ ನಿಪಿಃ **3** ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ನಕಾಶೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **12** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **12(ಎ)** ಎಂದು ಗುರುತಿಸಲಾಯಿತು. ಸಾಕ್ಷಿದಾರರಾದ **4** ರಿಂದ **6** ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ **05-06-2023** ರಂದು ಆರೋಪಿಗೆ ನೋಟಿಸ್ ಜಾರಿಮಾಡಿ ನನ್ನ ಮುಂದೆ ಹಾಜರಾಗಲು ನಿರ್ದೇಶಸಿದ್ದೆ.

ನನಗೆ ವರ್ಗಾವಣೆ ಆದ ನಂತರ ಮುಂದಿನ ತನಿಖೆಯನ್ನು ಚಾಸಾ **-13** ರವರು ಮಾಡಿರುತ್ತಾರೆ.

**CC 3212/2023**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಕೆ.ಎನ್ ವಕೀಲರಿಂದ**

ಆರೋಪಿ ಚಾಸಾ -1 ರವರ ಗಂಡ ಎಂದು ಖಾತ್ರಿಪಡಿಸಿಕೊಳ್ಳಲು ಚಾಸಾ -1 ರವರಿಂದ ದಾಖಲೆಯನ್ನು ನಾನು ಪಡೆದಿರಲಿಲ್ಲ. ನನ್ನ ತನಿಖಾ ಅವಧಿಯಲ್ಲಿ ಘಟನೆ ಆದ ಸ್ಥಳ ಚಾಸಾ -1 ರವರ ಮನೆ ಎಂದು ತೋರಿಸಲು ದಾಖಲೆಯನ್ನು ಜಪ್ತು ಪಡಿಸಿಕೊಂಡಿಲ್ಲ. ನಿಪಿಃ 1 ರಲ್ಲಿ ಯಾವ ಕಾರಣಕ್ಕೆ ಆರೋಪಿ ಹೊಡೆ ಬಡೆ ಮಾಡಿದ ಎಂದು ನಮೂದು ಮಾಡಿಲ್ಲ ಅಂದರೆ ಸರಿಯಲ್ಲ. ಹೊಡೆ ಬಡೆ ಮಾಡಿದ್ದರ ಬಗ್ಗೆ ಯಾವುದೇ ಎಂ.ಎಲ್.ಸಿ ವರದಿ ಆಸ್ಪತ್ರೆಯಿಂದ ಬಂದಿರಲಿಲ್ಲ ಅಂದರೆ ಸರಿ. ಸದರಿ ಮನೆ ಚಾಸಾ -1 ರವರ ತಮ್ಮನ ಮನೆ ಅಲ್ಲ ಅಂದರೆ ನನಗೆ ಗೊತ್ತಿಲ್ಲ.

ನನ್ನ ತನಿಖಾ ಅವಧಿಯಲ್ಲಿ ಮೊಬೈಲ್ ಮತ್ತು ಕನ್ನಡಕಗಳನ್ನು ನಾನು ಜಪ್ತುಪಡಿಸಿಕೊಂಡಿಲ್ಲ. ಚಾಸಾ -1 ರವರು ಹೆಂಗಸು ಎಂಬ ಕಾರಣಕ್ಕೆ ಅವರ ಮೇಲಿನ ಅನುಕಂಪದಿಂದ ಮತ್ತು ಆರೋಪಿಯ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಪಂಚನಾಮೆಯನ್ನು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಪಂಚನಾಮೆಯನ್ನು ಮಾಡಿಲ್ಲ ಮತ್ತು ಸಾಕ್ಷಿ ದಾರರ ಹೇಳಿಕೆಗಳನ್ನು ಪಡೆದಿದ್ದ ಅಂದರೆ ಸರಿಯಲ್ಲ. ಸುಳ್ಳು ತನಿಖೆಯನ್ನು ಮಾಡಿರುತ್ತೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.